## ಎಳೆಯರೊಳಗೊಂದಾಗಿ...

ಝೀ ಕನ್ನಡದ 'ಡ್ರಾಮಾ ಜ್ಯೂನಿಯರ್ಸ್'ನಲ್ಲಿ ಮಕ್ಕಳೊಂದಿಗೆ ತೀರ್ಪುಗಾರರೂ ಅಭಿನಯಿಸಿ ಪ್ರೇಕ್ಷಕರ ಮನಕ್ಕೆ ಮುದ ನೀಡಿದ್ದು ಸಂತಸದ ಸಂಗತಿ. 'ಅತ್ತೆ–ಸೊಸೆ ಎಂದರೆ ಎಣ್ಣೆ– ಶೀಗೆಕಾಯಿ' ಎಂಬ ಮಾತು ಹಿಂದಿನಿಂದ ಬಂದಿದ್ದು, ಅದನ್ನು ಅಳಿಸಲು ಎಷ್ಟೇ ಪ್ರಯತ್ನಪಟ್ಟರೂ ಒಂದೆಳೆ ಎಲ್ಲೊ ತಲೆ ಎತ್ತಿ ಉಳಿದೇ ಇದೆ ಎಂಬುದು ವಿಷಾದದ ಸಂಗತಿ. ಗೌರವಾನ್ವಿತ ಹಿರಿಯ ನಟಿ ಲಕ್ಷ್ಮಿಯವರು ಮುದಿ ಅತ್ತೆಯ ಪಾತ್ರದಲ್ಲಿ ಮಿಂಚುವುದರ ಜೊತೆಗೆ ಪರಿವರ್ತನೆಯ ಮನೋಭಾವವನ್ನು ತೋರಿದ ಸಂದೇಶವು ಉತ್ತಮವಾದುದು.

ಭಕ್ತ ಅಂಬರೀಷನ ಪಾತ್ರದಲ್ಲಿ ವಿಜಯ ರಾಘವೇಂದ್ರ ಸುಂದರವಾಗಿ ಕಾಣುತ್ತಿದ್ದರು. ರಂಗಭೂಮಿಯ ಸಂಭಾಷಣೆಗೆ ಇನ್ನೂ ಪಳಗಬೇಕು. ಮುಖ್ಯಮಂತ್ರಿ ಎಂದೇ ಖ್ಯಾತಿ ಪಡೆದ ಚಂದ್ರುರವರ ನಾಟಕವನ್ನು ನೋಡಿ ಹಲವು ವರ್ಷಗಳೇ ಉರುಳಿದ್ದವು. ಮತ್ತೊಮ್ಮೆ ನಮ್ಮ ಮನದಾಳದಲ್ಲಿ ಬಂದು ತಮ್ಮ ಪ್ರತಿಭೆ ಕುಂದಲಿಲ್ಲವೆಂದು ನಿರೂಪಿಸಿದರು. ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ನೀಡುವ ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂದಿದೆ. 'ಝೀ'ಗೆ ಅಭಿನಂದನೆಗಳು.

–ಲಲಿತಾ ಅಂಬಾಗಿಲು, ಉಪ್ಪುಂದ

## ಸೂಕ್ತ ಸಂದೇಶವಿರಲಿ

ಟಿವಿ ಪರದೆ ಮೇಲೆ ಕಿವಿಗಡಚಿಕ್ಕುವ ಧ್ವನಿಯಿಂದ ಮೂಡಿ ಬರುವ ಧಾರಾವಾಹಿ ಶೀರ್ಷಿಕೆ ಯಾವುದೆಂದು ಮರೆತಿದ್ದರೆ ಪರವಾಗಿಲ್ಲ ಮತ್ತೊಮ್ಮೆ ಗಮನಿಸಿ. ಅಲ್ಲಿನ ಕಥೆಗಾಗಲಿ, ತೋರಿಸುವ ದೃಷ್ಟಾಂತಗಳಿಗಾಗಲಿ ಅವರಿಟ್ಟ ಶೀರ್ಷಿಕೆ ಒಂದಂಶವೂ ತಾಳೆ ಹೊಂದದಿರುವುದು ಅಭಾಸವೇ ಸರಿ.

ವಾರದ ಪತ್ರ

## ಔಷಧ ಪ್ರಚಾರ ಸಲ್ಲ

ಇತ್ತೀಚೆಗೆ ಬಹುತೇಕ ವಾಹಿನಿಗಳಲ್ಲಿ 30 ನಿಮಿಷ ಆಯುರ್ವೇದ ಡಾಕ್ಟರ್‌ಗಳ ಸಮ್ಮುಖದಲ್ಲಿ ಸರ್ವ ರೋಗ ನಿವಾರಣೆ ಬಗ್ಗೆ ವಿವರಿಸುತ್ತಾರೆ. ವೀಕ್ಷಕರಿಂದಲೂ ಫೋನ್ ಮೂಲಕ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸೂಚಿಸುತ್ತಾರೆ. ಕಾಲದ ಬದಲಾವಣೆ, ದೇಹದಲ್ಲಾಗುವ ತೊಂದರೆಗಳಿಗೆ ಪರಿಹಾರ ನೀಡುತ್ತಾರೆ.

ಅಡುಗೆ ಕಾರ್ಯಕ್ರಮದ ಶುರುವಿನ ಮೊದಲ ಭಾಗದಲ್ಲಿ ಗಡ್ಡಧಾರಿಗಳು, ಕಾವಿ ಧರಿಸಿದ ಸನ್ಯಾಸಿ ವೇಷಧಾರಿಗಳು ಉದರ ಬೇನೆಗೆ, ತೂಕ ಇಳಿಸಲು, ಕಫ, ಕೆಮ್ಮು ಎಂಬಿತ್ಯಾದಿ ಸಮಸ್ಯೆಗಳಿಗೆಂದು ಕಷಾಯವೋ, ಮತ್ತೇನೋ ಪಾನೀಯವನ್ನು ಸೂಚಿಸುತ್ತಾರೆ. ಇಂತಹ ಪ್ರಹಸನಗಳ ಉದ್ದೇಶವಾದರೂ ಏನು? ಪ್ರೇಕ್ಷಕರೇನು ಮೂರ್ಖರೇ?

–ಮಧುರ ಸುಬ್ರಹ್ಮಣ್ಯ, ಬೆಂಗಳೂರು

ಅದರಲ್ಲಂತೂ ಕನ್ನಡ ಕಲರ್ಸ್ ವಾಹಿನಿಯಲ್ಲಿ ಬಿತ್ತರಗೊಳ್ಳುತ್ತಿರುವ 'ಅಗ್ನಿ ಸಾಕ್ಷಿ' ಎಂಬ ಧಾರಾವಾಹಿಗೆ ಸಂಬಂಧಪಟ್ಟಂತೆ ಈ ವಿಷಯದಲ್ಲಿ ಮುಲಾಜಿಲ್ಲದೇ 'ಎ' ಗ್ರೇಡ್ ಕೊಡಬಹುದು. ಧಾರಾವಾಹಿ ಆರಂಭದಿಂದಲೂ ಶೇಕಡಾ 60 ರಷ್ಟು ಭಾಗ 'ಚಂದ್ರಿಕಾ' ಎನ್ನುವ ಲೇಡಿ ಡಾನ್ ಹೆಣೆಯುವ ಕುತಂತ್ರ ತಿಂದು ಹೋದರೆ, ಇನ್ನುಳಿದ ಭಾಗ ಪುನರಾವರ್ತನೆ ಆಗುತ್ತಿರುವ ಹಳಸಲು ಸಂಭಾಷಣೆಗಳು, ದೃಶ್ಯಾವಳಿಗಳಿಂದ ತುಂಬಿ ತುಳುಕುತ್ತಿದೆ.

ನಿರ್ದೇಶಕರು ನೋಡುಗನ ಮನ, ಮನೆ ಹಾಳುಗೆಡುವ ಐಡಿಯಾಗಳನ್ನು ಬಿತ್ತರಿಸುವುದು ಬಿಡಲಿ, ಸಮಾಜದ ನಾನಾ ಸ್ತರಗಳಲ್ಲಿ ನೋವಿಗೆ ಸಿಲುಕಿ ನಲುಗುತ್ತಿರುವ ಸಹಸ್ರಾರು ಮಂದಿಗೆ ಸೂಕ್ತ ಮಾರ್ಗದರ್ಶನ ಅಥವಾ ಮನಃಶಾಂತಿ ನೀಡುವಂತಹ ಸಂದೇಶ ಬಿಂಬಿಸುವ ಪ್ರಯತ್ನ ಮಾಡಲಿ.

–ಅರವಿಂದ ಜಿ.ಜೋಷಿ, ಮೈಸೂರು

## ದಾರಿ ತಪ್ಪಿಸುವ ಧಾರಾವಾಹಿ

ಉದಯದ 'ನಂದಿನಿ'ಯ ದೃಶ್ಯವನ್ನು ಅನುಕರಿಸಲು ಹೋಗಿ ಹರಿಹರದ ಏಳು ವರ್ಷದ ಬಾಲಕಿ ಸಾವನ್ನಪ್ಪಿರುವ ದುರ್ಘಟನೆಯ ಸುದ್ದಿ ಓದಿ ಆಘಾತವಾಯಿತು.

ಇತ್ತೀಚೆಗೆ 'ಕಲರ್ಸ್ ಸೂಪರ್'ನ 'ಫ್ಯಾಮಿಲಿ ಪವರ್' ರಿಯಾಲಿಟಿ ಶೋನಲ್ಲಿ ಯುವತಿಯೊಬ್ಬಳು ಸಹಸ್ಪರ್ಧಿಯಾದ ಪುಟ್ಟ ಬಾಲಕಿ ಹೆಸರನ್ನು ಪ್ರಸ್ತಾಪಿಸುತ್ತಾ ಆಕೆಗೆ ಒಂದನೇ ಕ್ಲಾಸ್‌ನಲ್ಲಿಯೇ ಲವ್ ಪ್ರಪೋಸ್ ಬಂದಿರುವ ಬಗ್ಗೆ ಹೆಮ್ಮೆಯಿಂದ ಹೇಳಿದ್ದು ವಿಪರ್ಯಾಸವೇ ಸರಿ. ನಿರೂಪಕ ಪುನೀತ್ ಮಾತುಗಳನ್ನು ಕೇಳಿ ಕೊಂಚ ವಿಚಲಿತರಾದರು. ಮಕ್ಕಳ ಮನಸ್ಸನ್ನು ಅರ್ಥೈಸಿಕೊಳ್ಳುವುದೇ ಕಠಿಣವಾದ ಸಂದರ್ಭದಲ್ಲಿ ಅವರಿಡುವ ತಪ್ಪು ಹೆಜ್ಜೆಗಳನ್ನು ತಿದ್ದುವುದು ಬಹುಮುಖ್ಯ. ಅದನ್ನು ಟಿವಿಗಳೂ ಸಹ ತಮ್ಮ ಜವಾಬ್ದಾರಿ ಎನ್ನುವುದನ್ನು ತೋರಿಸಬೇಕು.

–ರಾಜೀವ್ ಎನ್. ಮಾಗಲ್

## ಅದ್ಭುತ ಫ್ಯಾಮಿಲಿ ಪವರ್

ಕಲರ್ಸ್‌ನ 'ಫ್ಯಾಮಿಲಿ ಪವರ್' ಕೌಟುಂಬಿಕ ರಿಯಾಲಿಟಿ ಶೋ ಅದ್ಭುತವಾಗಿದೆ. ಇಲ್ಲಿ ಎರಡು ಸಂಸಾರಗಳ ಮೂರು ತಲೆಮಾರಿನವರು ಭಾಗವಹಿಸುತ್ತಾರೆ. ಇಲ್ಲಿನ ಆಟ ಇತರ ಚಟುವಟಿಕೆಗಳು ಪೂರ್ಣವಾಗಿ ಹೊಸದಲ್ಲದಿದ್ದರೂ ವೀಕ್ಷಕರನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ರೀತಿ ಸ್ತುತ್ಯರ್ಹ. ಭಾಗವಹಿಸುವುವವರು, ತಾವು ಮನೆಯವರೊಡನೆ ಸೋತಾಗ, ಸಂತಸದಿಂದಲೇ ಒಪ್ಪಿಕೊಳ್ಳುವುದು ಶ್ಲಾಘನೀಯ.

ಪುನೀತ್ ರಾಜಕುಮಾರ್ ಅವರ ನಿರೂಪಣಾ ಶೈಲಿ, ಹಾವಭಾವ, ಸ್ಪರ್ಧಿಗಳೊಂದಿಗೆ ಅವರು ಬೆರೆಯುವ ರೀತಿ ನೋಡುಗರಿಗೆ ರಸದೌತಣ ನೀಡುತ್ತದೆ. ಹಾಗೆಯೇ ಸ್ಪರ್ಧೆಯಲ್ಲಿ ಭಾಗವಹಿಸುವ ಕುಟುಂಬಗಳು ತಮ್ಮ ಕುಟುಂಬವನ್ನು ಎಷ್ಟು ಅರಿತಿದ್ದಾರೆ, ಕುಟುಂಬ ಸದಸ್ಯರನ್ನು ನಾವು ಎಷ್ಟರ ಮಟ್ಟಿಗೆ ಅರಿತಿದ್ದೇವೆ ಎಂಬುದು ಇಲ್ಲಿ ತಿಳಿಯುತ್ತದೆ. ಹಾಗೆ ಹತ್ತು ಲಕ್ಷ ರೂಗಳನ್ನು ಗೆಲ್ಲಲೇಬೇಕೆಂಬ ಹುಮ್ಮಸ್ಸಿನಿಂದ ಕುಟುಂಬದ ಸದಸ್ಯರು ನೀಡುವ ಪೈಪೋಟಿ ಹಾಗೂ ಸ್ಪರ್ಧೆಯಲ್ಲಿನ ಆಟಗಳು, ಹಂತಗಳು, ನಿಯಮಗಳು, ಸ್ಪರ್ಧಿಗಳು ಆಟದಲ್ಲಿ ಭಾಗವಹಿಸುವಿಕೆ ತುಂಬಾ ಸೊಗಸಾಗಿದೆ. ಅವಿಭಕ್ತ ಕುಟುಂಬದ ಮಹತ್ವವನ್ನು ಸಾರುವ ಈ ಶೋವನ್ನು ವಾರಾಂತ್ಯದಲ್ಲಿ ಮನೆ ಮಂದಿ ಕೂತು ವೀಕ್ಷಿಸಬಹುದು.

–ಪ್ರಶಾಂತ್ ಮೇಟಿ, ಶ್ರೀನಾಥ್ ಕೊನೇಟಿ ಬೆಂಗಳೂರು

## ಸವಿ ಸವಿ ನೆನಪು

34 ವಸಂತಗಳನ್ನು ಪೂರೈಸಿದ ಸಂಭ್ರಮದಲ್ಲಿ ಚಂದನ ವಾಹಿನಿಯಲ್ಲಿ ಬೆಳಿಗ್ಗೆ 7 ರಿಂದ 9ರ ವರೆಗೆ ಬೆಳಗುತ್ತಿರುವ 'ಬೆಳಗು' ಕಾರ್ಯಕ್ರಮ ಅತ್ಯಂತ ಸುಂದರವಾಗಿ, ಸೊಗಸಾಗಿ, ಸಿಹಿಯಾಗಿ ಮೂಡಿಬರುತ್ತಿದೆ.

ನೆನಪಿನಂಗಳದಲ್ಲಿ ಪ್ರಸಾರವಾದ ಡಾ. ರಾಜ್‌ಕುಮಾರ್ ಅವರ ಸಂದರ್ಶನ 'ಸವಿ ನೆನಪುಗಳು ಬೇಕು, ಸವಿಯಲೂ ಬದುಕು' ಎನ್ನುವಂತಿತ್ತು. ಅವರ ಕನ್ನಡ ಭಾಷೆಯ ಉಚ್ಚಾರಣೆ, ವಾಕ್ಯ ರಚನೆ, ಉತ್ತರಿಸಿದ ರೀತಿ ಕೇಳುವುದೇ ಸೊಗಸು.

ದಿನಕ್ಕೊಬ್ಬ ಸಾಧಕರು, ಕವಿಗಳು, ಕಲಾವಿದರನ್ನು ಪರಿಚಯಿಸುತ್ತಿರುವ ರೀತಿ ಪ್ರಶಂಸಾರ್ಹ. ಇಂತಹ ಕಾರ್ಯಕ್ರಮ ನೀಡುತ್ತಿರುವ ಚಂದನದ ಬಳಗಕ್ಕೆ ನಮ್ಮ ಅಭಿನಂದನೆಗಳು.

–ಎಂ.ಸಿ. ವಿಜಯಲಕ್ಷ್ಮಿ, ಎಂ.ಕೆ. ರಾಮಾನುಜಂ, ಬೆಂಗಳೂರು

## ಬೆವರಿನ ಉಪ್ಪಿನಕಾಯಿ..

ಗಂಗಾ ಉಪ್ಪಿನಕಾಯಿಗೆ ನಿಂಬೆಹಣ್ಣು ಹೆಚ್ಚುತ್ತಾ ಆ ಕೈಯಿಂದೊಮ್ಮೆ ಈ ಕೈಯಿಂದೊಮ್ಮೆ ಬೆವರು ಒರೆಸಿಕೊಳ್ಳುತ್ತಿದ್ದರೆ ಉಪ್ಪಿನಕಾಯಿ ತಿನ್ನುವವರೆಲ್ಲ ಬೆಚ್ಚೇ ಬಿಡುತ್ತಾರಷ್ಟೆ. ಹೆಚ್ಚುವ ಪದ್ಧತಿಯೂ ಗೊತ್ತಿಲ್ಲ. ಹೇಗೆಂದು ಹೇಳಿಕೊಡಬೇಕಲ್ವೆ?

ಗಂಗಾದಲ್ಲಿ ಸಕ್ಕೂ ತನ್ನ ಮೊಬೈಲ್ ಮ್ಯಾಲ ಆಣೆ ಮಾಡಿ ಹೇಳ್ತಿನ್ರೀ ಅನ್ನೋದು ಅಸಂಬದ್ಧ ಎನಿಸುತ್ತದೆ.

–ರತ್ನಾ ಅಶೋಕ ಗೊರವರ, ಧಾರವಾಡ